ದಿನಾಂಕ 05-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

2) ಆದಿನ ನಾವು ಮಲಗಿದ್ದ ಜಾಗೆಯಲ್ಲಿ ಸುಮಾರು 7-8 ಜನ ಮಲಗಿದ್ದೆವು. ಆ ಜಾಗೆ ಕೃಷ್ಣ ಮಠದಿಂದ ಸುಮಾರು 50 ಮೀಟರ್ ಗಳ ಅಂತರ. ಅದು ಕೃಷ್ಣ ಮಠದಿಂದ ಪಶ್ಚಿಮದ ಕಡೆಗೆ. ಆದಿನ ಮಲಗಿದ್ದ ನಮ್ಮಲ್ಲಿ ಮೂರು ಜನಕ್ಕೆ ಪೆಟ್ಟಾಗಿತ್ತು. ಅವರಿಗೆ ಹೇಗೆ ಪಟ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಆದಿನ ಘಟನೆ ಆ ಒಂದು ಸ್ಥಳದಲ್ಲಿ ಆಗಿತ್ತು. ನಾವು ಮಲಗಿದ್ದ ಜಾಗೆಗೆ ಯಾವುದೇ ತಂತಿ ಬೇಲಿ ಇಲ್ಲ. ಆ ಜಾಗೆಗೆ ಪೊಲೀಸರು ಬಂದಿದ್ದರು ಎಂದು ನನಗೆ ನಂತರ ತಿಳಿದಿದೆ. ಆದಿನ ಬಂದಿದ್ದ ಪೊಲೀಸರು ಪೆಟ್ಟಾಗಿದ್ದವರನ್ನು ವಿಚಾರಿಸಿದ್ದರು ಎಂದರೆ ನಿಜ. ಅವರು ನನ್ನ ಬಳಿ ಬಂದು ವಿಚಾರಿಸಿಲ್ಲ. ಆಗ ವಿಚಾರಿಸಿದ್ದವರು ಹೇಗೆ ಪೆಟ್ಟಾಗಿದೆ ಎಂದು ಗೊತ್ತಿಲ್ಲ ಎಂದು ಹೇಳಿದ್ದರು ಎಂದರೆ ನಿಜ. ಆಗ ಪೊಲೀಸರು ಪೆಟ್ಟಾಗಿದ್ದವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ನನ್ನನ್ನು ಕರೆದುಕೊಂಡು ಹೋಗಿರಲಿಲ್ಲ.

3) ನಾನು ಮಾರನೇ ದಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ನಿಜ. ಆಗ ನನಗೆ ಹೇಗೆ ಪೆಟ್ಟಾಗಿತ್ತು ಎಂದು ಆಸ್ಪತ್ರೆಯಲ್ಲಿ ಹೇಳಿಲ್ಲ ಎಂದರೆ ನಿಜ. ಆದಿನ ಗುಂಪು ಘರ್ಷಣೆಯಾಗಿದ್ದರಿಂದ ಯಾರಿಂದ, ಯಾರಿಗೆ ಪೆಟ್ಟಾಗಿತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ನಿಜ. ನಾನು ಪೊಲೀಸರಿಗೆ ಘಟನೆಯ ವಿಷಯವಾಗಿ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ-8 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಸಹಿ ಮಾಡಿದಾಗ ಬೇರೆಯವರು ಸಹ ಸಹಿ ಮಾಡಿದ್ದರು, ಅವರು ಯಾರು ಎಂದು ಗೊತ್ತಿಲ್ಲ.

4) ಪೊಲೀಸರು ಘಟನೆ ನಡೆದ ಜಾಗೆ ಉಡುಪಿ ಗ್ರಾಮ ಎಂದು ನಮೂದಿಸಿದ್ದಾರೆ. ನನ್ನನ್ನು ಠಾಣೆಗೆ ಕರೆಯಿಸಿದ್ದರು. ನನ್ನ ಸಹಿಗಳನ್ನು ದಾಖಲೆಗಳಿಗೆ ಠಾಣೆಯಲ್ಲಿ ಪಡೆದಿದ್ದರು. ನಿಪಿ-8 ರಲ್ಲಿಯ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೆ ಎಂದರೆ ನಿಜ. ನಿಶಾನೆ ಪಿ-9 ರ ಪೋಟೋವನ್ನು ಕೃಷ್ಣಮಠದ ಮೈದಾನದಲ್ಲಿ

ಪೊಲೀಸರು ತೆಗೆದಿದ್ದರು. ನನಗೆ ಈಗ ತೋರಿಸಿದ ಎಂಒ-1ರ ಚೂರಿಯನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಕೃಷ್ಣಮಠದ ಬಳಿಯ ಮೈದಾನದಲ್ಲಿ ನೋಡಿದ್ದೆ. ಅದನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದರು ಎಂದರೆ ನಿಜ.

5) ಆದಿನ ನನ್ನ ಬಟ್ಟೆಗಳಿಗೂ ಸಹ ರಕ್ತದ ಕಲೆ ಆಗಿತ್ತು. ಆ ಬಟ್ಟೆಗಳನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದರು. ನನಗೆ ದೂರಿನ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಎಂಒ-1ಕ್ಕೂ ಮತ್ತು ನಾನು ಹೇಳಿದ ಘಟನೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನ್ಯಾಯಾಲಯದಲ್ಲಿ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ಮತ್ತು 9ರ ದಾಖಲೆಗಳನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಪೊಲೀಸರ ತನಿಖೆಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.